ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1125 |
| ಸದಸ್ಯರ ಹೆಸರು | : | ಶ್ರೀ ಮಧು ಜಿ. ಮಾದೇಗೌಡ |
| ಉತ್ತರಿಸುವ ದಿನಾಂಕ | : | 28-12-2022. |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಕ್ರಮ ಸಂಖ್ಯೆ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಮೈಸೂರು, ಮಂಡ್ಯ ಮತ್ತು ರಾಮನಗರ ಜಿಲ್ಲೆಗಳ ವ್ಯಾಪ್ತಿಯಲ್ಲಿ ಮೈಸೂರು-ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯ ದಶಪಥ ರಸ್ತೆ ನಿರ್ಮಾಣಕ್ಕೆ ಎಷ್ಟು ಹೆಕ್ಟೇರ್ ಭೂಮಿ ವಶಕ್ಕೆ ಪಡೆಯಲಾಗಿದೆ; ಇದರಲ್ಲಿ ತರಿ, ಖುಷ್ಕಿ ಭೂಮಿಯ ಪ್ರಮಾಣ ಎಷ್ಟು; ಮನೆ/ ವಾಣಿಜ್ಯ ಕಟ್ಟಡಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು) | ರಾಷ್ಟ್ರೀಯ ಹೆದ್ದಾರಿ 275 ಮೈಸೂರು-ಬೆಂಗಳೂರು ರಸ್ತೆಯು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ರವರ ಕಾರ್ಯವ್ಯಾಪ್ತಿಗೆ ಒಳಪಡುತ್ತದೆ. ಸದರಿ ಹೆದ್ದಾರಿಯನ್ನು ದಶಪಥದ ರಸ್ತೆಯನ್ನಾಗಿ ಅಭಿವೃದ್ಧಿ ಪಡಿಸಲು ಮೈಸೂರು, ಮಂಡ್ಯ ಮತ್ತು ರಾಮನಗರ ಜಿಲ್ಲೆಗಳಲ್ಲಿ ಸ್ವಾಧೀನ ಪಡಿಸಿಕೊಂಡಿರುವ ಭೂಮಿಯ ವಿಸ್ತೀರ್ಣ, ಕೃಷಿ ಹಾಗೂ ಕೃಷಿಯೇತರ ಭೂಮಿ, ಮನೆ ಹಾಗೂ ವಾಣಿಜ್ಯ ಕಟ್ಟಡಗಳ ಸಂಖ್ಯೆಗಳನ್ನು ಈ ಕೆಳಕಂಡಂತೆ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಧಿಕಾರ ರವರು ನೀಡಿರುತ್ತಾರೆ. |

1. ರಾಷ್ಟ್ರೀಯ ಹೆದ್ದಾರಿ-275ರ ನಿರ್ಮಾಣಕ್ಕಾಗಿ ಸ್ವಾಧೀನ ಪಡಿಸಿಕೊಂಡ ಭೂಮಿ

ಹೆಕ್ಟೇರ್‌ಗಳಲ್ಲಿ

| ಕ್ರಮ ಸಂಖ್ಯೆ | ಜಿಲ್ಲೆ | ವಶಪಡಿಸಿಕೊಂಡ ವಿಸ್ತೀರ್ಣ |
|---|---|---|
| 1 | ರಾಮನಗರ | 255.29 |
| 2 | ಮಂಡ್ಯ | 260.15 |
| 3 | ಮೈಸೂರು | 13.39 |

2. ಕೃಷಿ ಹಾಗೂ ಕೃಷಿಯೇತರ ಭೂಮಿಯ ವಿವರ

ಹೆಕ್ಟೇರ್‌ಗಳಲ್ಲಿ

| ಕ್ರಮ ಸಂಖ್ಯೆ | ಜಿಲ್ಲೆ | ಕೃಷಿ ಭೂಮಿ | ಕೃಷಿ ಯೇತರ ಭೂಮಿ | ಸರ್ಕಾರಿ ಭೂಮಿ |
|---|---|---|---|---|
| 1 | ರಾಮನಗರ | 198.59 | 37.05 | 19.65 |
| 2 | ಮಂಡ್ಯ | 187.50 | 42.03 | 30.62 |
| 3 | ಮೈಸೂರು | 7.76 | 5.03 | 0.60 |

3. ಮನೆಗಳು ಮತ್ತು ವಾಣಿಜ್ಯ ಕಟ್ಟಡಗಳು

| ಕ್ರಮ ಸಂಖ್ಯೆ | ಜಿಲ್ಲೆ | ಮನೆಗಳು | ವಾಣಿಜ್ಯ ಕಟ್ಟಡಗಳು |
|---|---|---|---|
| 1 | ರಾಮನಗರ | 950 | 83 |
| 2 | ಮಂಡ್ಯ | 1102 | 292 |
| 3 | ಮೈಸೂರು | 67 | 32 |

| ಕ್ರಮ ಸಂಖ್ಯೆ | ಪ್ರಶ್ನೆಗಳು | ಉತ್ತರಗಳು |
|---|---|---|
| ಆ) | ಸದರಿ ಯೋಜನೆಗೆ ಭೂಮಿ ಕಳೆದುಕೊಂಡವರಿಗೆ ಯಾವ ಮಾನದಂಡಗಳ ಆಧಾರದ ಮೇಲೆ ಪರಿಹಾರ ವಿತರಿಸಲಾಗಿದೆ; (ವಿವರ ನೀಡುವುದು) | ರಾಷ್ಟ್ರೀಯ ಹೆದ್ದಾರಿಗಳ ಅಭಿವೃದ್ಧಿಗಾಗಿ ಸ್ವಾಧೀನಪಡಿಸಿಕೊಳ್ಳುವ ಭೂಮಿಯನ್ನು ರಾಷ್ಟ್ರೀಯ ಹೆದ್ದಾರಿ ಕಾಯ್ದೆ-1956 ಮತ್ತು RFCTLARR Act 2013 ರಂತೆ ಕೈಗೊಳ್ಳಲಾಗಿದೆ.<br><br>ರಾಷ್ಟ್ರೀಯ ಹೆದ್ದಾರಿ ಕಾಯ್ದೆ-1956ರಂತೆ 3 (A) |

| | | |
|---|---|---|
| | | ಅಧಿಸೂಚನೆಯನ್ನು ಕೇಂದ್ರ ಗೆಜೆಟ್ ನಲ್ಲಿ ಪ್ರಕಟಿಸಿ ಸ್ಥಳೀಯ ವಾರ್ತಾ ಪತ್ರಿಕೆಗಳಲ್ಲಿ ಸಾರ್ವಜನಿಕರ ಮಾಹಿತಿಗಾಗಿ ಪ್ರಕಟಿಸಲಾಗಿದೆ. ಈ ಸಂಬಂಧ ನಿಗದಿತ ಅವಧಿಯೊಳಗೆ ಸೆಕ್ಷನ್ 3 (C) ರಡಿ ಯಾವುದಾದರೂ ಆಕ್ಷೇಪಣೆ ಬಂದಲ್ಲಿ ವಿಚಾರಣೆ ನಡೆಸಲಾಗುವುದು. ನಂತರದಲ್ಲಿ ಭೂಮಿ ಕಳೆದುಕೊಂಡವರ ಸಮ್ಮುಖದಲ್ಲಿ ಜಾಯಿಂಟ್ ಮೆಷರ್‌ಮೆಂಟ್ ಚೆಕ್ (JMC) ಕೈಗೊಳ್ಳಲಾಗಿದೆ.<br><br>3(D) ಅಧಿಸೂಚನೆಯನ್ನು ಕೇಂದ್ರ ಗೆಜೆಟ್‌ನಲ್ಲಿ ಪ್ರಕಟಿಸಿ ಸ್ಥಳೀಯ ವಾರ್ತಾ ಪತ್ರಿಕೆಗಳಲ್ಲಿ ಸಾರ್ವಜನಿಕರ ಮಾಹಿತಿಗಾಗಿ ಪ್ರಕಟಿಸಲಾಗಿದೆ.<br><br>ಗ್ರಾಮಾವಾರು 3(G) ಅವಾರ್ಡ್‌ಗಳನ್ನು ತಯಾರಿಸಲು ಅಗತ್ಯವಿರುವ ದಾಖಲೆಗಳನ್ನು ಪಡೆಯಲು ಸಭೆಗಳನ್ನು ಕೈಗೊಳ್ಳಲಾಗಿದೆ. ಹಾಗೂ RFCTLARR Act 2013 ರಂತೆ 3 (G) ಅವಾರ್ಡ್‌ಗಳನ್ನು ತಯಾರಿಸಿ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅನುಮೋದನೆಗಾಗಿ ಸಲ್ಲಿಸಲಾಗುವುದು.<br><br>3 (G) ಅವಾರ್ಡ್‌ಗಳಿಗೆ ಅನುಮೋದನೆ ದೊರೆತ ನಂತರ ಭೂಮಿ ಕಳೆದುಕೊಂಡವರಿಗೆ ಭೂ ಪರಿಹಾರ ಪಡೆಯಲು ನೋಟೀಸ್ ಗಳನ್ನು ನೀಡಲಾಗಿದೆ.<br><br>ಭೂಮಿ ಕಳೆದುಕೊಂಡವರ ಕಂದಾಯ ದಾಖಲೆಗಳು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ದಾಖಲೆಗಳನ್ನು ಪರಿಶೀಲಿಸಿ RTGS ಮುಖಾಂತರ ಮತ್ತು ಪ್ರಸ್ತುತ ಭೂಮಿ ರಾಶಿ ಪೋರ್ಟಲ್ ನಿಂದ ಪರಿಹಾರ ಧನವನ್ನು ಭೂಮಾಲೀಕರ ಬ್ಯಾಂಕ್ ಖಾತೆಗಳಿಗೆ ಜಮೆ ಮಾಡಲಾಗಿದೆ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವರದಿಸಿರುತ್ತಾರೆ. |
| ಇ) | ಈವರೆವಿಗೂ ಭೂಪರಿಹಾರ ಪಡೆದ ಫಲಾನುಭವಿಗಳ ಸಂಖ್ಯೆ ಎಷ್ಟು; ವಿತರಿಸಲಾದ ಪರಿಹಾರ ಮೊತ್ತವೆಷ್ಟು; ವಿತರಿಸಲು ಬಾಕಿ ಇರುವ ಪರಿಹಾರ ಮೊತ್ತ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು) | ಸದರಿ ಯೋಜನೆಗೆ ಈವರೆಗೂ ಭೂಪರಿಹಾರ ಪಡೆದ ಫಲಾನುಭವಿಗಳ ಸಂಖ್ಯೆ ಪರಿಹಾರದ ಮೊತ್ತ ಹಾಗೂ ಪಾವತಿಸಲು ಬಾಕಿ ಇರುವ ಪರಿಹಾರದ ಮೊತ್ತದ ವಿವರ ಈ ಕೆಳಕಂಡಂತೆ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವರದಿಸಿರುತ್ತಾರೆ. |

| ಕ್ರಮ ಸಂ. | ಜಿಲ್ಲೆ | ಪಾವತಿಸಿದ ಒಟ್ಟು ಮೊತ್ತ ಕೋಟಿಗಳಲ್ಲಿ | ಭೂ ಮಾಲೀಕರ ಸಂಖ್ಯೆ | ಪಾವತಿಸ ಬೇಕಾದ ಭೂಪರಿಹಾರ ಮೊತ್ತ ಕೋಟಿಗಳಲ್ಲಿ |
|---|---|---|---|---|
| 1 | ಬೆಂಗಳೂರು ನಗರ | 560.27 | 384 | 1.02 |
| 2 | ರಾಮನಗರ | 1494.01 | 3403 | 3.31 |
| 3 | ಮಂಡ್ಯ | 1164.43 | 5178 | 2.48 |
| 4 | ಮೈಸೂರು | 127.73 | 290 | 1.62 |

**ಈ)** ಈ ಹೆದ್ದಾರಿಯಲ್ಲಿ ಎಷ್ಟು ಕಿರು ಸೇತುವೆ, ದೊಡ್ಡ ಸೇತುವೆ, ಅಂಡರ್ ಪಾಸ್ ಗಳನ್ನು ನಿರ್ಮಿಸಲಾಗಿದೆ; (ಜಿಲ್ಲಾವಾರು ಮಾಹಿತಿ ನೀಡುವುದು)

ರಾಷ್ಟ್ರೀಯ ಹೆದ್ದಾರಿ 275ರ ಅಭಿವೃದ್ಧಿ ಕಾರ್ಯವನ್ನು 2 ಪ್ಯಾಕೇಜ್ ಗಳಲ್ಲಿ ಕೈಗೊಳ್ಳಲಾಗುತ್ತಿದ್ದು, ಸದರಿ ಪ್ಯಾಕೇಜ್‌ಗಳಲ್ಲಿ ಕಿರು ಸೇತುವೆ, ಬೃಹತ್ ಸೇತುವೆ ಹಾಗೂ ಅಂಡರ್ ಪಾಸ್ ಗಳನ್ನು ನಿರ್ಮಿಸಲು ಪ್ರಾವದಾನ ಮಾಡಲಾಗಿದ್ದು, ವಿವರಗಳು ಈ ಕೆಳಕಂಡಂತಿದೆ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವರದಿಸಿರುತ್ತಾರೆ.

ಪ್ಯಾಕೇಜ್-1 ಬೆಂಗಳೂರು-ನಿಡಘಟ್ಟ ವಿಭಾಗ

ಸಂಖ್ಯೆಗಳಲ್ಲಿ

| ಕ್ರಮ ಸಂಖ್ಯೆ. | ಜಿಲ್ಲೆ | ಕಿರು ಸೇತುವೆ | ಬೃಹತ್ ಸೇತುವೆ | ಅಂಡರ್ ಪಾಸ್ |
|---|---|---|---|---|
| 1 | ಬೆಂಗಳೂರು ನಗರ | 3 | 0 | 0 |
| 2 | ರಾಮನಗರ | 12 | 4 | 31 |
| 3 | ಮಂಡ್ಯ | 2 | 0 | 1 |

ಪ್ಯಾಕೇಜ್-2 ನಿಡಘಟ್ಟ-ಮೈಸೂರು ವಿಭಾಗ

ಸಂಖ್ಯೆಗಳಲ್ಲಿ

| ಕ್ರಮ ಸಂ. | ಜಿಲ್ಲೆ | ಕಿರು ಸೇತುವೆ | ಬೃಹತ್ ಸೇತುವೆ | ಅಂಡರ್ ಪಾಸ್ |
|---|---|---|---|---|
| 1 | ಮಂಡ್ಯ | 23 | 5 | 43 |
| 2 | ಮೈಸೂರು | 2 | 0 | 2 |

**ಉ)** ಈ ಹೆದ್ದಾರಿಯ ಎರಡು ದಿಕ್ಕುಗಳಲ್ಲಿ ಮಂಡ್ಯ ನಗರಕ್ಕೆ ಪ್ರವೇಶ ಮತ್ತು ಹೊರಹೋಗಲು (entry & exit points) ಎಲ್ಲಿ ಸ್ಥಳ ಗುರುತಿಸಲಾಗಿದೆ; (ಮಾಹಿತಿ ನೀಡುವುದು)

ನಿಡಘಟ್ಟ-ಮೈಸೂರು ಪ್ಯಾಕೇಜ್-2ರ ಕಿ.ಮೀ.94.901 ಹುಮ್ಮದನಹಳ್ಳಿ ಬಳಿ ಮಂಡ್ಯ ನಗರವನ್ನು ಪ್ರವೇಶಿಸಲು ಹಾಗೂ ಕಿ.ಮೀ 104.385 ನಿಡವಾಳು ಹಳ್ಳಿ ಬಳಿ ಮಂಡ್ಯ ನಗರದಿಂದ ನಿರ್ಗಮಿಸಲು ಅವಕಾಶ ಕಲ್ಪಿಸಲಾಗಿದೆ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವರದಿಸಿರುತ್ತಾರೆ.

**ಊ)** ಹೆದ್ದಾರಿಯ ಕಾಮಗಾರಿ ಸಂಪೂರ್ಣವಾಗಿ ಯಾವ ವೇಳೆ ಮುಕ್ತಾಯವಾಗಲಿದೆ ಮತ್ತು ಎಂದಿನಿಂದ ಸಾರ್ವಜನಿಕ ಬಳಕೆಗೆ ಲಭ್ಯವಾಗಲಿದೆ?

ಪ್ಯಾಕೇಜ್-1 ಬೆಂಗಳೂರು-ನಿಡಘಟ್ಟ ಭಾಗದ ಹೆದ್ದಾರಿಯ ಕಾಮಗಾರಿಯು ಈಗಾಗಲೇ ಬಹುತೇಕ ಪೂರ್ಣಗೊಂಡಿದ್ದು, ವಾಹನ ಸಂಚಾರಕ್ಕೆ ಅನುವು ಮಾಡಿಕೊಡಲಾಗಿರುತ್ತದೆ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವರದಿಸಿರುತ್ತಾರೆ.

ಪ್ಯಾಕೇಜ್-2 ನಿಡಘಟ್ಟ-ಮೈಸೂರು ಭಾಗದ ಹೆದ್ದಾರಿಯ ಕಾಮಗಾರಿಯನ್ನು ದಿನಾಂಕ:27.02.2023 ರೊಳಗೆ ಪೂರ್ಣಗೊಳಿಸಲಾಗುವುದು ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವರದಿಸಿರುತ್ತಾರೆ.

ಕಡತ ಸಂಖ್ಯೆ: ಲೋಇ 447 ಸಿಎನ್‌ಹೆಚ್ 2022 (ಇ)

(ಸಿ.ಸಿ. ಪಾಟೀಲ)
ಲೋಕೋಪಯೋಗಿ ಸಚಿವರು